ಶ್ರೀ ಬಿ. ರಾಚಯ್ಯ.—ಇದು ಮೊದಲು ಪ್ರೈವೇಟ್ ಜಾಯಿಂಟು ಸ್ಟಾಕ್ ಕಂಪನಿಯಾಗಿತ್ತು. ಆಗ ಕಂಪನಿಯವರು ಇವರನ್ನು ಡಿಸ್‌ಮಿಸ್ ಮಾಡಿದ್ದರು. ಇದರ ಮೇಲೆ ಅಪೀಲು ಟ್ರಿಬ್ಯುನಲ್‌ಗೆ ಹೋಗಿ ಅಲ್ಲಿ ಆದು ಅಲ್ಲಿ ರಾಜೀನಾಮೆ ಎಂದು ಆರ್ಡರಾದ ಮೇಲೆ ಇವರನ್ನು ಸರಕಾರ ಅವರು ಹೇಳಿದ ಕಾಂಪ್ರಮೈಸು ಮೇಲೆ ನೇಮಕ ಮಾಡರಾಗಿದೆ. ಇದರಲ್ಲಿ ಸರಕಾರ ಯಾವ ಚಾರ್ಜು ಗಳನ್ನು ಕೊಟ್ಟಿಲ್ಲ.

Sri H. SIDDAVEERAPPA.—May I know from the Government whether this man against whom there were a number of complaints is not an arch enemy of the factory and his mismanagement was responsible for bringing the factory into trouble ? In spite of all these grave allegations, what is the attachment the Government has for this man ? Is it a fact that this person is a friend of the local Congressman there and under his influence this person is again reinstated ?

Sri B. RACHAIAH.—No. I do not think the local Congressman has influenced me or the Director of the Spun Silk Mills.

ಶ್ರೀ ಎಸ್. ಶಿವಪ್ಪ.—ಈ ಮನುಷ್ಯ ಮೊದಲು ಬೆಂಗಳೂರು ಷೋ ರೂಮಿನಲ್ಲಿದ್ದ. ಅಲ್ಲಿ ಸಾಕಷ್ಟು ದುಂದು ಹಾಗೂ ಅಪವ್ಯವಹಾರವನ್ನು ಮಾಡಿ ಅದನ್ನು ಮುಚ್ಚಿಸಿದ್ದಾಯಿತು. ಈಗ ಪುನಃ ಅದೇ ವ್ಯಕ್ತಿಯನ್ನು ಡೆನ್ನಪಟ್ಟಣ ಸಿಲ್ಕ್‌ಹೌಸಿನಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳರಾಗಿದೆ, ಈತನು ನಾನ್ ಎಸ್. ಎಸ್. ಎರ್. ಸಿ. ಇಂಥವನನ್ನು ಹೇಗೆ ನೇಮಕಮಾಡಿಕೊಂಡರು ?

ಶ್ರೀ ಬಿ. ರಾಚಯ್ಯ.—ಹಿಂದೆ ಮಿಸ್‌ಮ್ಯಾನೇಜ್ ಮಾಡಿದವನನ್ನು ಈಗ ಕೆಲಸಕ್ಕೆ ನೇಮಕ ಮಾಡಿಕೊಂಡರು ಎಂದು ಹೇಳಲು ಸಾಧ್ಯವಿಲ್ಲ. ನಾನು ಯಾವುದನ್ನೂ ಮುಚ್ಚಿಹಾಕುತ್ತಿಲ್ಲ. ಹಿಂದೆ ಶ್ರೀಮಾನ್ ಎಚ್. ಸಿದ್ದವೀರಪ್ಪನವರು ಮಂತ್ರಿಗಳಾಗಿದ್ದ ಕಾಲಕ್ಕೆ ಇವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳರಾಗಿತ್ತು.....

Sri H. SIDDAVEERAPPA.—I took him then. Thereafter there were a number of complaints against him. Now a man who was dismissed has again been reinstated by this Government !

Sri B. RACHAIAH.—We cannot disregard the tribunal award which is already there.

Mr. DEPUTY SPEAKER.—Question time is over.

QUESTION FOR ANSWER ON THE DAY

(but not taken up)

Sale of levy collected in South Kanara District

21. Sri SUBBARAO HALSNAD (Bindur).—

Will the Minister of State for Food and Civil Supplies be pleased to state :—

(*a*) whether it has come to their notice that the paddy collected last year through levy in Coondapur Taluk, South Kanara District shown as stored in godowns was sold at better rates in the rainy season and a possible quantity of paddy was replaced after the new crop and the rest was shown as destroyed in the accounts ;

(*b*) the quantity of paddy collected through levy during 1967-68 and the quantity of paddy yet to be collected in Coondapur Taluk ?

A.—Sri **B. VITTALDAS SHETTY** (Minister of State for Food and Civil Supplies).—

(*a*) No such instance has come to the Notice of Government.

(*b*) Total quantity of paddy collected : 17,372 quintals. Total quantity of paddy to be collected : 24,524 quintals.

MOTION *re*: THE SCARCITY CONDITIONS PREVAILING IN CERTAIN AREAS IN THE STATE

Sri VEERENDRA PATIL (Chief Minister).—Sir, I move :

"That the scarcity conditions existing in certain areas of the State and the relief measures adopted and to be adopted be taken into consideration :

Mr. DEPUTY SPEAKER.—Motion moved :

"That the scarcity conditions existing in certain areas of the State and the relief measures adopted and to be adopted be taken into consideration."

NOTICE OF PRIVILEGE BY Sri H. N. NANJEGOWDA

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಅಧ್ಯಕ್ಷರೇ, ನಾನು ಈಗ ಒಂದು ಪ್ರಿವಿಲೇಜ್ ಮೋಷನ್ನನ್ನು ತಮ್ಮ ಅಪ್ಪಣೆ ಪಡೆದು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ—

ಈಗಿರತಕ್ಕ ಮಂತ್ರಿಮಂಡಲದಲ್ಲಿ ಹೊಸದಾಗಿ ಮಂತ್ರಿಗಳಾಗಿರುವ ಶ್ರೀ ಕೆ. ಲಕ್ಕಪ್ಪನವರು ಇದೇ ವರ್ಷದ ಆಗಸ್ಟ್ 15 ಮತ್ತು 16ನೇ ತಾರೀಖುಗಳಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಟೂರ್ ಪ್ರೋಗ್ರಾಮನ್ನು ಇಟ್ಟುಕೊಂಡಿದ್ದರು. ನನಗೆ ಅವರು ತಮ್ಮ ಆ ಟೂರ್ ಪ್ರೋಗ್ರಾಮಿನ ಕಾಪಿ ಒಂದನ್ನು ಕಳುಹಿಸಲಿಲ್ಲ ; ಕಳುಹಿಸದಿದ್ದರೂ ಪರವಾಗಿ ಇಲ್ಲ. ಆ ವಿಚಾರವನ್ನು ನಾನು ಅನಂತರ ಹೇಳುತ್ತೇನೆ. ಈ ಮಂತ್ರಿಗಳು ಪ್ರವಾಸ ಹೋಗಿದ್ದ ಕಡೆಗಳಲ್ಲಿ ಭಾಷಣ ಮಾಡತಕ್ಕ ಸಂದರ್ಭದಲ್ಲಿ ಅದರಲ್ಲೂ ಎರಡು ಕಡೆಗಳಲ್ಲಿ ಇವರು ಭಾಷಣ ಮಾಡತಕ್ಕ ಕಾಲದಲ್ಲಿ ಅಲ್ಲಿ ಸೇರಿದ್ದ ಜನರ ಎದುರಿನಲ್ಲಿ ನನ್ನ ದಕ್ಷತೆ ಮತ್ತು ಜ್ಞಾನಾರ್ಜನೆಗಳ ಬಗ್ಗೆ ಟೀಕೆ ಮಾಡಿದ್ದಾರೆ. ಇವರು ಆ ಜನರನ್ನು ಉದ್ದೇಶಿಸಿ ಮಾತನಾಡುತ್ತಾ ನೀವು ಸರಿಯಾದ ವ್ಯಕ್ತಿಯನ್ನು ನಿಮ್ಮ ಕ್ಷೇತ್ರಕ್ಕೆ ಚುನಾವಣೆ ಮಾಡಲಿಲ್ಲ, ನೀವು ಚುನಾವಣೆ ಮಾಡಿರತಕ್ಕ ಆ ನಂಜೇಗೌಡ ಬಹಳ ಅದಕ್ಷ, ಆತ ಬೇರೆ ಪಕ್ಷಕ್ಕೆ ಸೇರಿದವನು, ಅವನಿಂದ ನಿಮ್ಮ ಕ್ಷೇತ್ರಕ್ಕೇನೂ ಅನುಕೂಲವಾಗಲಾರದು, ನೀವು ಆ ನಂಜೇಗೌಡನಿಂದ ಏನು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತೆ ಎಂದು ಆತನಿಗೆ ಓಟುಗಳನ್ನು ಕೊಟ್ಟಿರಿ ಎಂದು ಈ ರೀತಿ ಅನೇಕ ಪದಗಳನ್ನು ಬಳಸಿ ನನ್ನ ಬಗ್ಗೆ ಒಂದು ಅನ್ಪರ್ಷನ್ ಮಾಡಿದ್ದಾರೆ. ನಾನು ಈ ಸಭೆಯ ಒಬ್ಬ ಸದಸ್ಯ. ನನಗೆ ವಿರುದ್ಧವಾಗಿ ನನ್ನ ಹಕ್ಕುಭಾದ್ಯತೆಗಳನ್ನು ಮೊಟಕು ಮಾಡಲು ಇವರು ಪ್ರಯತ್ನಪಟ್ಟಿರುವುದರಿಂದ ನಾನೀಗ ಒಂದು ಪ್ರಿವಿಲೇಜ್ ಮೋಷನ್ ತಂದಿದ್ದೇನೆ.